(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಅವರಿಗೆ ಕೆಲಸ ಸಿಕ್ಕತಕ್ಕ ಅವಕಾಶವಿದೆ. ಅದಕ್ಕೆ ಫ್ಯಾಮಿನ್ ರಿಲೀಫ್ ಒಂದರಲ್ಲಿಯೇ ಒದಗಿಸ ಬೇಕಾಗಿಲ್ಲ. ಪಬ್ಲಿಕ್ ವರ್ಕ್ ಇರಾಖೆಯ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಹಿಂದೆ ಹಾಕಿದ್ದ ಬ್ಯಾನ್ ತೆಗೆದಿರುವುದರಿಂದ ಅವರಲ್ಲಿಯೂ ಅಷ್ಟು ಕೆಲಸ ದೊರೆಯುತ್ತದೆ. ಖರ್ಚಾಗಿರುವ ದುಡ್ಡಿನಲ್ಲಿ ಎಷ್ಟು ಜನ ಕೆಲಸ ಮಾಡಿದ್ದಾರೆಂದು ಅವರಿಗೇ ಗೊತ್ತಾಗುತ್ತದೆ. ಒಂದು ದಿನಕ್ಕೆ ಒಬ್ಬ ಆಳಿಗೆ ಒಂದು ರೂಪಾಯಿ 30 ಪೈಸೆಯಂತೆ ಲೆಕ್ಕ ಹಾಕಿಕೊಳ್ಳಬಹುದು.

Sri D. B. KALMANKAR.—In view of the fact that there is no sufficient rainfall and in the majority of villages in these two taluks, no khariff sowing has taken place, may I request the Government to intensify these works in both these Taluks? The amount spent for the purpose is meagre. I had suggested already that the tank work in Afzalpur Taluk and the tank work of Salgaon which was taken up as a budgeted work in Aland Taluk, may be intensified.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಹೆಚ್ಚು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯಾವ ಯಾವ ಕೆರೆಗಳಿಗೆ ಅಂದಾಜು ಮಂಜೂರಾಗಿ, ಅವರ ಬಗ್ಗೆ ವಿವರಗಳೆಲ್ಲ ಸರ್ಕಾರಕ್ಕೆ ಬಂದಿವೆ ಅಂಥ ಕೆರೆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಒಂದು ಕಾಗದ ಬರೆದು ಕಳುಹಿಸಿರುವುದರಿಂದ ಶ್ರೀ ಕೋಣಂದೂರು ಲಿಂಗಪ್ಪನವರ ಗಮನ ಸೆಳೆಯುವ ಸೂಚನೆಯನ್ನು ಆಮೇಲೆ ತೆಗೆದುಕೊಳ್ಳುತ್ತೇನೆ.

Change in the Sitting hour of the House.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ನಾನು ಸಭಾಧ್ಯಕ್ಷಿಣಿಯವರಿಗೆ ನಲ್ಲತಕ್ಕ ಗೌರವವನ್ನು ನಲ್ಲಿಸುತ್ತ ನಮ್ಮ ಸಭೆಯ ಕಾರ್ಯಕಲಾಪಗಳು ಯಾರಿಗೂ ಅನಾನುಕೂಲವಾಗದ ಹಾಗೆ ನಡೆಯುವ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಸೂಚಿಸುತ್ತೇನೆ. ಸೃಷ್ಟಿಕರ್ತರಾದ ಬ್ರಹ್ಮ, ವಿಷ್ಣು, ಮಹೇಶ್ವರರಂತೆ ಸಭಾನಾಯಕರು, ವಿರೋಧ ಪಕ್ಷದ ನಾಯಕರು ಮತ್ತು ತಾವು ಈ ಸಭೆಯನ್ನು ಆಳುತ್ತಿದ್ದೀರಿ. ಈ ಹೊತ್ತು ಮಧ್ಯಾಹ್ನ ಎರಡು ಗಂಟೆಗೆ ಸಭೆ ಇದೆ ಎಂದು ತಿಳಿಸಿರಾಗಿತ್ತು. ಅದರಂತೆ ಕೆಲವು ಸದಸ್ಯರು ಊಟಕ್ಕೆ ಕೂಡ ಹೋಗಲಿಲ್ಲ, ಕೆಲವರಿಗೆ ಊಟ ಸಿಕ್ಕಲಿಲ್ಲ. ಮಂತ್ರಿಗಳು ಕೂಡ ಎರಡು ಗಂಟೆಗೆ ಬಂದು ಕೂತಿದ್ದರು, ಅನೇಕ ಪತ್ರಿಕಾ ಪ್ರತಿನಿಧಿಗಳೂ ಊಟಕ್ಕೆ ಹೋಗದೆ ಅವರಿಗೂ ತೊಂದರೆಯಾಯಿತು. ಮುಂಚೆಯೇ ಮೂರು ಗಂಟೆಗೆ ಸಭೆ ಸೇರುತ್ತದೆ ಎಂದು ತಿಳಿಸಿದ್ದರೆ ಅನುಕೂಲವಾಗುತ್ತಿತ್ತು. ಆದುದರಿಂದ ದಯವಿಟ್ಟು ಯಾರಿಗೂ ತೊಂದರೆ ಯಾಗದ ಹಾಗೆ ಸಹಾಯ ಮಾಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೆಚ್ಚಾಗಿ ಇಲ್ಲಿರುವುದೇ ಇಲ್ಲ. ಅದೇ ನಮಗೆ ಬಂದಿರುವ ಕಷ್ಟ. ಅದಕ್ಕೋಸ್ಕರವೇ ಸಭೆಯಲ್ಲಿ ಏನು ನಡೆಯುತ್ತದೆ ಎನ್ನುವುದು ಅವರಿಗೆ ಗೊತ್ತಾಗುವುದಿಲ್ಲ.

Taking up a certain Call attention Notice.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಲೋಕೋಪಯೋಗಿ ಮಂತ್ರಿಗಳ ಗಮನವನ್ನು ಸೆಳೆಯುವ ಒಂದು ಸೂಚನೆಯನ್ನು ತಮಗೆ ಬೆಳಿಗ್ಗೆ ಕಳುಹಿಸಿದ್ದೆ. ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು.—ಬೆಳಿಗ್ಗೆ ಕಳುಹಿಸಿದ್ದರೆ ಈಗಲೇ ಬರುವುದಕ್ಕೆ ಹೇಗೆ ಸಾಧ್ಯ? ನನ್ನ ಹತ್ತಿರ ಅನೇಕ ಗಮನ ಸೆಳೆಯುವ ಸೂಚನೆಗಳು ಬಂದಿರುವುದು ಇದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸಭಾಪತಿಗಳೇ, ಈ ಹೊತ್ತಿನ ಪತ್ರಿಕೆಯಲ್ಲಿ ಶಾಸನಕರ ಭವನದಲ್ಲಿ ಇಸ್ಪೀಟು ಸಾಕು, ಗಮನ ಬೇಕು ಎಂದು ಹೇಳಿರುವುದಾಗಿ ದೊಡ್ಡದಾಗಿ ಬಂದಿದೆ. ನಾವು ಯಾರೂ ಇಸ್ಪೀಟು ಆಡುವವರಲ್ಲ, ಬೀಡಿ ಸೇದುವವರಲ್ಲ. ಯಾರನ್ನು ಕುರಿತು ಹೇಳಿದರು ಏನು ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಇವರು ಇಸ್ಪೀಟು ಆಡುವವರಲ್ಲ. ಬೀಡಿ ಸೇದುವವರಲ್ಲ, ಸಿಗರೇಟು ಮುಟ್ಟುವವರಲ್ಲ, ಸಿನಿಮಾ ನೋಡುವುದಕ್ಕೆ ಹೋಗುವವರಲ್ಲ....

ಶ್ರೀ ವಾಟಾಳ್ ನಾಗರಾಜ್.—ಸಿನಿಮಾ ನೋಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಮ್ಮ ದೇಶದಲ್ಲಿ ನಾನಾ ತರಹ ಆಟಗಳಿವೆ. ಈ ಆಟ ಆಡದೆ ಇದ್ದರೆ ಇನ್ನು ಯಾವ ಆಟವಾಡುತ್ತಾರೋ ನನಗೇನು ಗೊತ್ತು ಸ್ವಾಮಿ (ನಗು).

ಅಧ್ಯಕ್ಷರು.—ಇಸ್ಪೀಟು ಆಟ ಆಡುವುದು ಪಾಪ ಎಂದು ನನಗೆ ಗೊತ್ತಾಗಿಲ್ಲ. ಏನೇ ಇರಲಿ ಈ ವಿಷಯವನ್ನು ಇಲ್ಲಿಗೆ ಸಾಕು ಮಾಡೋಣ.

PAPERS LAID ON THE TABLE.

Sri N HUTCHAMASTHY GOWDA (Minister for Revenue).—Madam, I beg to lay :

(1) Notification No. RD. 173 MVS 68 dated 25th March, 1970.

The Mysore General Services (Revenue Subordinate Branch) Village Accountants (Recruitment) Rules, 1970.

(2) Nocification No. GSR 133 dated 10th May 1971.

The Mysore General Services (Revenue Subordinate Branch) Village Accountants (Recruitment) (Second Amendment) Rules, 1971.

Under Section 198 of the Mysore Land Revenue Act, 1964.

MADAM SPEAKER.—The notifications are laid on the Toble of the House.

REVISED BUDGET ESTIMATES FOR 1972-73 DEMANDS FOR GRANTS

Demand Nos. 1, 5, 34, 35, 36, 40, 41, 52 and 54.

Sri M. Y. GHORPADE (Minister for Finance) —Madam, on the recommendation of the Governor, I beg to move :

> "That a sum not exceeding Rs. 10,98,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 1 "Taxes on Income Other than Corporation Tax'."